# ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಕುತ್ಪಾಡಿ, ಉಡುಪಿ

## "ಜನಪದ ವೈದ್ಯಸಿರಿ" ಪ್ರಶಸ್ತಿಯ ಆಯ್ಕೆಗೆ ಅರ್ಜಿ ಆಹ್ವಾನ

ಕರ್ನಾಟಕದ ಮೂಲೆಮೂಲೆಗಳಲ್ಲಿ ಅನೇಕರು ಪರಂಪರಾಗತ ವೈದ್ಯ ಪದ್ಧತಿಯನ್ನು ಮುಂದುವರಿಸಿಕೊಂಡು ಜನಸೇವೆಯಲ್ಲಿ ತತ್ಪರರಾಗಿರುವರು. ಅವರ ಜ್ಞಾನ ಭಂಡಾರದ ಉಳಿವಿಗಾಗಿ ಹಾಗೂ ಪ್ರೋತ್ಸಾಹಕ್ಕಾಗಿ ರಾಜರ್ಷಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಕುತ್ಪಾಡಿ, ಉಡುಪಿಯ "ಜಾನಪದ ವೈದ್ಯಕೀಯ ಸಂಶೋಧನಾ ಕೇಂದ್ರದ" ಮೂಲಕ ನೀಡುವ **ರಾಜ್ಯ ಮಟ್ಟದ "ಜನಪದ ವೈದ್ಯಸಿರಿ"** ಪ್ರಶಸ್ತಿಗಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕನಿಷ್ಠ 15 ವರ್ಷ ಸೇವಾನುಭವವುಳ್ಳ ಕರ್ನಾಟಕದ ನುರಿತ ನಾಟಿವೈದ್ಯರು ಅಥವಾ ಅವರ ಪ್ರತ್ಯಕ್ಷ ಮಾಹಿತಿಯುಳ್ಳವರು **ಈ ಕೆಳಗಿನ ವಿವರಗಳನ್ನು ಆಯಾ ಗ್ರಾಮ ಪಂಚಾಯತಿನ ಅಧ್ಯಕ್ಷರ ಶಿಫಾರಸು ಪತ್ರದೊಂದಿಗೆ ಕಳುಹಿಸಲು ವಿನಂತಿಸಲಾಗಿದೆ.**

ಸಂಪೂರ್ಣ ಹೆಸರು, ಇತ್ತೀಚಿಗಿನ ಭಾವಚಿತ್ರ, ವಯಸ್ಸು, ವಿದ್ಯಾಭ್ಯಾಸ, ವೃತ್ತಿ, ಲಿಂಗ, ಖಾಯಂ ವಿಳಾಸ, ದೂರವಾಣಿ ಸಂಖ್ಯೆ, ಯಾವ ಕಾಯಿಲೆಯ ಚಿಕಿತ್ಸೆಗೆ ಪರಿಣತರು, ಗುರುವಿನ ಹೆಸರು, ಎಷ್ಟು ವರ್ಷದ ಅನುಭವ, ಬಳಸುವ ಔಷಧ ಮೂಲಗಳು (ಸಸ್ಯ/ಖನಿಜ), ಸ್ವಂತ ಔಷಧಿ ತಯಾರಿಸುತ್ತಾರೆಯೇ, ಹಳೆಯ ಗ್ರಂಥಗಳಿವೆಯೇ, ಅನುಭವದ ದಾಖಲಾತಿ ಇದೆಯೋ, ಇತರೆ ಪ್ರಮಾಣಪತ್ರ, ಇತರೆ ಸನ್ಮಾನಪತ್ರ ಇದೆಯೋ ಎಂಬುದರ ಬಗ್ಗೆ ಮಾಹಿತಿಯನ್ನು ಈ ಕೆಳಗಿನ ವಿಳಾಸಕ್ಕೆ **ಆಗಸ್ಟ್ 15, 2026** ರ ಒಳಗಾಗಿ ಕಳುಹಿಸಬೇಕು.

**ವಿ.ಸೂ :**

1) ಈ ಹಿಂದೆ ಅರ್ಜಿ ಸಲ್ಲಿಸಿದವರು ತಮ್ಮ ಹೆಸರನ್ನು ಪತ್ರದ ಮೂಲಕ ನೊಂದಾಯಿಸಿಕೊಳ್ಳಬಹುದು.

2) ಜಾನಪದ ವೈದ್ಯಕೀಯ ಪದ್ಧತಿಯಲ್ಲಿ ಉಪಯೋಗಿಸುವಂತಹ ತಾಳೆಗರಿ/ಪತ್ರಗಳು, ಸಲಕರಣೆಗಳು, ಪುಸ್ತಕ ಇತ್ಯಾದಿಗಳನ್ನು ನಮ್ಮ ಸಂಶೋಧನಾ ಕೇಂದ್ರದಿಂದ ಸಂಗ್ರಹಿಸಿ ಉಳಿಸಲಾಗುವುದು. ಇಂತಹ ವಸ್ತುಗಳನ್ನು ಕೊಡಲು ಇಚ್ಛಿಸುವವರು ಈ ವಿಳಾಸಕ್ಕೆ ಮಾಹಿತಿ ತಲುಪಿಸಬಹುದು.

ಅರ್ಜಿ ಸಲ್ಲಿಸಬೇಕಾದ ವಿಳಾಸ,

**ಪ್ರಾಂಶುಪಾಲರು**
**ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ**
**ಅಂಚೆ: ಕುತ್ಪಾಡಿ**
**ಉಡುಪಿ ಜಿಲ್ಲೆ – 574118.**

********